ಅ) ಹಾಗಿದ್ದಲ್ಲಿ, ಸದರಿ ರಸ್ತೆಯ ದುರಸ್ತಿಗಾಗಿ ಸುತ್ತಮುತ್ತಲಿನ ಗ್ರಾಮಸ್ಥರು ಮನವಿ ಮಾಡಿದ್ದಾಗ್ಯೂ ಇದುವರೆವಿಗೆ ದುರಸ್ತಿಯನ್ನು ಮಾಡದೆ ಇರಲು ಕಾರಣಗಳೇನು,

ಇ) ನವಲಗುಂದದಿಂದ ಬಲ್ಲರವಾಡ ಗ್ರಾಮದವರೆಗೆ ರಸ್ತೆ ದುರಸ್ತಿಯ ಕಾರ್ಯವನ್ನು ಈಗಲಾದರೂ ಕೈಗೆತ್ತಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬಂದಿದೆ.

ಆ) ಮತ್ತು ಇ) ಈ ರಸ್ತೆಯು ಗ್ರಾಮಾಂತರ ರಸ್ತೆಯಾಗಿದ್ದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ರಸ್ತೆ ದುರಸ್ತಿ ಕಾರ್ಯವನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಗೋಪಾಲ ಮಯ್ಯಕಂಂದ ಕಾನಡೆ.—ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವುದಂ ೧೯೬೭–೮೮ರ ರಿಂದ. ಇದಕ್ಕಿಂತ ಮೊದಲು ಈ ರಸ್ತೆ ಕಾರ್ಯವನ್ನು ಏಕೆ ತೆಗೆದುಕೊಳ್ಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್ —ಇದು ಒಟ್ಟು ೧೨ ಕಿಲೋಮೀಟರ್ ರಸ್ತೆ. ೮ ಕಿಲೋ ಮೀಟರ್ ವರೆಗೆ ಎರಡಂ ಗ್ರೇಡ್ ಜಿಲ್ಲಿಯನ್ನು ಹಾಕಲಾಗಿದೆ. ಉಳಿದಂತಹ ರಸ್ತೆಗೆ ಮೊದಲನೇ ದರ್ಜೆ ಜಿಲ್ಲಿಯನ್ನು ಹಾಕಿ ಮಾಡಿದ್ದಾರೆ. ಎರಡನೇ ದರ್ಜೆ ಜಿಲ್ಲಿ ಹಾಕಿ ದುರಸ್ತಿ ಕೆಲಸ ಮಾಡಬೇಕಾಗಿರುತ್ತದೆ. ಹಿಂದೆ ಈ ಕೆಲಸ ನಡೆದಿದೆ. ಈ ವರ್ಷದಲ್ಲಿ ಜಿಲ್ಲಾ ಪರಿಷತ್ತಿನವರು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತಿನಿಂದ ಈ ಕೆಲಸ ಮಾಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಗೋಪಾಲ ಮಂಕಂಂದ ಕಾನಡೆ.— ಈ ಕೆಲಸವನ್ನು ಪ್ರಾರಂಭ ಮಾಡಿದಾಗ ಖರ್ಚಾದ ಹಣವೆಷ್ಟು ? ಜಿಲ್ಲಾ ಪರಿಷತ್ತಿನವರು ಆ ರಸ್ತೆಗೆ ಖರ್ಚು ಮಾಡಬೇಕಾದ ಹಣವೆಷ್ಟು ?

ಶ್ರೀ ಎಂ. ಚಂದ್ರಶೇಖರ್.—ಇದಕ್ಕೆ ಹಿಂದೆ ಆಗಿರುವ ವೆಚ್ಚವೆಷ್ಟು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ನನ್ನ ಹತ್ತಿರ ಮಾಹಿತಿಯಿಲ್ಲ. ಅದನ್ನು ಒದಗಿಸಿಕೊಡುತ್ತೇನೆ.

ಧಾರವಾಡದಲ್ಲಿ ಶೀತಾಗಾರವನ್ನು ನಿರ್ಮಿಸುವುದಂ.

೧೫೧೪. ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ–ನಗರ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದಲ್ಲಿ ಒಂದು ಶೀತಾಗಾರವನ್ನು ಕಟ್ಟಬೇಕೆಂದು ತೋಟಗಾರಿಕೆ ಇಲಾಖೆಯವರು ರೂಪಿಸಿದ ಯೋಜನೆಯು ಯಾವ ಹಂತದಲ್ಲಿದೆ ?

ಆ) ಈ ಶೀತಾಗಾರ ಕಟ್ಟಡದ ಕೆಲಸವು ವಿಳಂಬ ಆಗುತ್ತಿರುವುದು ಸುತ್ತ ಮುತ್ತಲಿನ ಆಲೂಗಡ್ಡೆ ಮಂತ್ತು ತರಕಾರಿ ಬೆಳೆಯುವ ರೈತರಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಸರ್ಕಾರ ಈ ಶೀತಾಗಾರದ ಯೋಜನೆಯನ್ನು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ನೆರವಿನಿಂದ ಕೈಗೊಳ್ಳಲಂ ಯೋಜಿಸಲಾಗಿದೆ. ಈ ಯೋಜನೆಯನ್ನು ೪೯.೯೧ ಕೋಟಿ ರೂ.ಗಳ ಅಂದಾಜಿನಲ್ಲಿ ತಯಾರು ಮಾಡಿರುವ ಸಮಗ್ರ ತೋಟಗಾರಿಕೆ ಯೋಜನೆಯ ಅಂಗವಾಗಿ ಅಳವಡಿಸಲಾಗಿದೆ. ಈ ಯೋಜನೆಯನ್ನು ವಿಶ್ವ ಬ್ಯಾಂಕಿನ ನೆರವು ಪಡೆಯುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಶೀತಾಗಾರ ಕಟ್ಟಡದ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ನಾಲ್ಕು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಇದು ರೈತರಿಗೆ ಆಲೂಗಡ್ಡೆ ಬೀಜ ಪೂರೈಕೆಗೆ ಮತ್ತು ಬಿತ್ತನೆ ಬೀಜವನ್ನು ಇಡಲಿಕ್ಕೆ ಬಹಳ

ಅವಶ್ಯಕತೆ ಇರುತ್ತದೆ. ರೈತರ ಬಗ್ಗೆ ಬಹಳ ಕಾಳಜಿ ಇರತಕ್ಕಂಥ ಸರ್ಕಾರದವರು ಈ ಶೈತ್ಯಾಗಾರವನ್ನು ಬಹಳ ತೀವ್ರವಾಗಿ ಕಟ್ಟಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಮಂತ್ರಾಂತರವಾಗಿಯಾಗಲಿ ಅಥವಾ ವಿ ಸಿ. ಬ್ಯಾಂಕ್ ಮುಖಾಂತರವಾಗಿಯಾಗಲಿ ಬೇರೆ ಯಾವ ಮುಖಾಂತರವಾಗಿಯಾದರೂ ತೀವ್ರ ಕ್ರಮ ತೆಗೆದುಕೊಂಡು ಈ ವರ್ಷದಲ್ಲಿಯೇ ಧಾರವಾಡದಲ್ಲಿ ಶೀತಾಗಾರ ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ಶೈತ್ಯಾಗಾರ ಕಟ್ಟಡದ ನಿರ್ಮಾಣಕ್ಕೆ ಬೇಕಾದಂಥ ಸಂಸ್ಥೆಯವರು ಒಂದು ಎಕರೆ ಜಮೀನನ್ನು ಜಾಗವನ್ನು ಈಗಾಗಲೇ ವ್ಯವಸಾಯೋತ್ಪನ್ನ ಮಾರ್ಕೆಟಿಂಗ್ ಸಂಸ್ಥೆಯಿಂದ ೧೯೮೫ನೇ ಇಸವಿಯಲ್ಲಿ ಮೂವತ್ತು ಸಾವಿರ ರೂಪಾಯಿಗಳಿಗೆ ಕೊಂಡುಕೊಳ್ಳಲಾಗಿದೆ. ಈ ಯೋಜನೆಯನ್ನು ಸಾಮಾನ್ಯವಾಗಿ ಜಾಗತಿಕ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಂಡು ಕಟ್ಟಬೇಕಾಗಿದೆ. ವರ್ಲ್ಡ್‌ಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕೆಂದರೆ ೨-೩ ವರ್ಷಗಳೇ ಆಗುತ್ತದೆ. ಈಗ ಅಂತಿಮಘಟ್ಟಕ್ಕೆ ಬಂದಂ ಕಟ್ಟಡಕ್ಕೆ ಬೇಕಾದ ಹಣ ಮಂಜೂರಾಗುವ ಸ್ಥಿತಿಯಲ್ಲಿದೆ. ಮಾನ್ಯ ಸದಸ್ಯರು ಇನ್ನು ಒಂದಂ ವರ್ಷದಲ್ಲಿಯೇ ಕಟ್ಟಲಾಗುತ್ತದೆಯೇ ಎಂದಂ ಕೇಳಿರುತ್ತಾರೆ. ಹಣ ಮಂಜೂರಾದ ತಕ್ಷಣವೇ ಅಂದರೆ ಒಂದು ವರ್ಷಕ್ಕೆ ಮುಂಚಿತವಾಗಿಯೇ ಪ್ರಾರಂಭ ಮಾಡುವ ಸೂಚನೆ ಇದೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಬಹಳ ಅವಶ್ಯಕವಾಗಿ ಧಾರವಾಡಕ್ಕೆ ಒಂದು ಶೈತ್ಯಾಗಾರ ಕಟ್ಟಡಬೇಕಾಗಿದೆ, ಏತಕ್ಕೆಂದರೆ ಇಡೀ ಕರ್ನಾಟಕದಲ್ಲಿ ಬಹಳ ಉತ್ತಮವಾದ ಆಲೂಗೆಡ್ಡೆಯನ್ನು ಧಾರವಾಡದಲ್ಲಿ ಬೆಳೆಯುತ್ತಿದ್ದಾರೆ. ಆದ್ದರಿಂದ ರೈತರಿಗೆ ಅವಶ್ಯಕವಾಗಿ ಬೀಜಗಳನ್ನು ಸಂಗ್ರಹಣೆ ಮಾಡಿಕೊಳ್ಳುವ ಸಲುವಾಗಿ ಮತ್ತು ಆಲೂಗೆಡ್ಡೆಯನ್ನು ಪೂರೈಕೆ ಮಾಡಲು ಶೈತ್ಯಾಗಾರವನ್ನು ಆದಷ್ಟು ತೀರ್ವವಾಗಿ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಒಳ್ಳೆಯದು. ಆಗಬಹುದಂ. ಈಗಾಗಲೇ ಹೇಳಿದ್ದೇನೆ ಒರೇ ಧಾರವಾಡದಲ್ಲಿ ಒಂದೇ ಕಡೆಯಲ್ಲ, ಎಲ್ಲ ಕೇಂದ್ರಗಳಲ್ಲೂ ಶೈತ್ಯಾಗಾರಗಳ ನಿರ್ಮಾಣಕ್ಕಾಗಿ ಎರಡೂಕೋಟಿ ರೂಪಾಯಿಗಳ ಯೋಜನೆ ಫೈನಲೈಸ್ ಆಗುವಂತ ಪರಿಸ್ಥಿತಿ ಇದೆ, ಅದಂ ಆದ ತಕ್ಷಣ ಈ ಕೆಲಸವನ್ನು ತೆಗೆದುಕೊಂಡು ಮಾಡುತ್ತೇವೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವುದರ ಕುರಿತಂ

೧೨೭೧ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳೆಷ್ಟು ? (ಕಲಾ ಮತ್ತು ವಿಜ್ಞಾನ ಕಾಲೇಜುಗಳ ವಿವರ ನೀಡುವುದು)

ಆ) ಆ ಪೈಕಿ, ಸ್ವಂತ ಕಟ್ಟಡಗಳನ್ನು ಹೊಂದಿರುವ ಮತ್ತು ಹೊಂದಿಲ್ಲದ ಕಾಲೇಜುಗಳೆಷ್ಟು ?

ಇ) ಸ್ವಂತ ಕಟ್ಟಡಗಳನ್ನು ಕಟ್ಟಲು ಕೈಗೊಂಡ ಕ್ರಮಗಳೇನು ?

ಈ) ಕೆಲವು ಕಡೆ ಕಾಲೇಜುಗಳಿದ್ದರೂ (ಖಾಸಗಿ) ಸರಿಯಾದ ಪೀಠೋಪಕರಣ, ಕಟ್ಟಡಗಳು, ಬೋಧಕ ವರ್ಗದವರಿಲ್ಲದಿರುವ ಸರ್ಕಾರಿ ಕಾಲೇಜನ್ನು ಪ್ರಾರಂಭಿಸುವ ಸರ್ಕಾರದವರ ಚಿಂತನೆ ಏನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಕಳೆದ ಮೂರು ವರ್ಷಗಳಿಂದ ಸ್ಥಾಪಿಸಿರುವ ಪ್ರಥಮದರ್ಜೆ ಕಾಲೇಜುಗಳ ವಿವರ ಈ ಕೆಳಗೆ ನಮೂದಿಸಿದೆ.

೧)	೧೯೮೫-೮೬	ಕಲಾ ಕಾಲೇಜುಗಳು ಪಟ್ಟಿಲ್ಲ
೨)	೧೯೮೬-೮೭	
೩)	೧೯೮೭-೮೮	